## ನಿಮ್ಮೊಡನೆ

# ವಧುಗಳ ಬರಗಾಲ! ಬರುವುದೆ ಮಳೆಗಾಲ?

ಮದುವೆಯಾಗಲು ಹುಡುಗರು ಪೇಚಾಡುತ್ತಿದ್ದಾರೆ ಎಂದಮಾತ್ರಕ್ಕೆ, ಹೆಣ್ಣುಮಕ್ಕಳಿಗೆ ವರ ಸಿಗುವುದು ಈಗ ಸುಲಭ ಎಂದರ್ಥವಲ್ಲ. ಸಂಗಾತಿಯ ಆಯ್ಕೆಯ ತೊಡಕುಗಳು ಗಂಡು–ಹೆಣ್ಣು ಇಬ್ಬರಿಗೂ ಒಂದೇ ಆಗಿವೆ. ಆದರೆ, ಈಗ ಬೇಡಿಕೆಗಳನ್ನು ಮಂಡಿಸುವುದು ಗಂಡಿನ ಹಕ್ಕಾಗಿಯಷ್ಟೇ ಉಳಿದಿಲ್ಲ.



ಈಶ್ವರ್

ಹೆಣ್ಣು ಸಿಗದೆ ಪರದಾಡುವ ಹುಡುಗರ ಸಂಕಷ್ಟ ರಾಜಕಾರಣಿಗಳ ಗಮನಸೆಳೆದು, ಇದೇ ಮೊದಲ ಬಾರಿಗೆ ಚುನಾವಣಾ ವಿಷಯವಾಗಿ ಬಳಕೆಯಾಗಿದೆ. 'ಹೆಣ್ಣು ಸಿಗದವರಿಗೆ ಮದುವೆ ಮಾಡಿಸುತ್ತೇವೆ' ಎಂದು ಇಬ್ಬರು ಪಕ್ಷೇತರ ಅಭ್ಯರ್ಥಿಗಳು ನೀಡಿದ ಭರವಸೆ ಈ ಬಾರಿಯ ವಿಧಾನಸಭಾ ಚುನಾವಣೆಯ ಕುತೂಹಲಕಾರಿ ಸಂಗತಿಗಳಲ್ಲೊಂದು. ಬೆಳಗಾವಿ ಜಿಲ್ಲೆಯ ಗುರುಪುತ್ರ ಕುಳ್ಳೂರ ಮತ್ತು ಅವರ ಸಹೋದರ ಪುಂಡಲೀಕ ಅವರಿಗೆ ಅವಿವಾಹಿತ ತರುಣರು ಮತಗಳ ರೂಪದಲ್ಲಿ ಕಾಣಿಸಿದ್ದಾರೆ. 'ವಧು–ವರರಿಗೆ ಮದುವೆ ಭಾಗ್ಯ ಯೋಜನೆ–2023 ಗ್ಯಾರಂಟಿ' ಎನ್ನುವುದು ಅವರ ಘೋಷಣೆ. ಬಡವರು, ರೈತರ ಮಕ್ಕಳಿಗೆ ಮದುವೆಯಾಗಲು ಹೆಣ್ಣು ದೊರೆಯುತ್ತಿಲ್ಲ ಎಂದು ಹಲವರು ವ್ಯಕ್ತಪಡಿಸಿದ ಬೇಸರವನ್ನೇ ತಮ್ಮ ಪ್ರಣಾಳಿಕೆಯಲ್ಲಿ ಆದ್ಯತೆಯ ಭರವಸೆಯನ್ನಾಗಿಸಿಕೊಂಡ ಜಾಣ್ಮೆ ಅವರದು.

ಜಾತ್ಯತೀತ ಜನತಾದಳದ ಚುನಾವಣಾ ಪ್ರಚಾರದ 'ಪಂಚರತ್ನ ಯಾತ್ರೆ' ಸಮಯದಲ್ಲಿ ಕೋಲಾರದ ಯುವಕನೊಬ್ಬ, 'ವಧುಗಳ ಬರಗಾಲ'ದ ಬಗ್ಗೆ ಎಚ್‌.ಡಿ. ಕುಮಾರಸ್ವಾಮಿ ಅವರ ಗಮನಸೆಳೆದಿದ್ದ. ರೈತ ಯುವಕರಿಗೆ ಮದುವೆ ವಯಸ್ಸು ಮೀರುತ್ತಿದ್ದರೂ ವಧು ದೊರೆಯದಿರುವ ವಿಷಯವನ್ನು ಪ್ರಸ್ತಾಪಿಸಿ, 'ನೀವು ಮುಖ್ಯಮಂತ್ರಿ ಆದ ಕೂಡಲೇ ನಮ್ಮ ಜಿಲ್ಲೆಯ ವಧುಗಳು ಬೇರೆ ಜಿಲ್ಲೆಯ ವರಗಳನ್ನು ಮದುವೆಯಾಗುವುದನ್ನು ನಿಷೇಧಿಸಿ ನಿಯಮ ಜಾರಿಗೆ ತರಬೇಕು' ಎಂದು ಒತ್ತಾಯಿಸುವುದರ ಜೊತೆಗೆ, 'ನಮಗೆ ನೀವೇ ವಧುಗಳನ್ನು ಹುಡುಕಿಕೊಡಬೇಕು' ಎಂದೂ ಮನವಿ ಮಾಡಿಕೊಂಡಿದ್ದ.

ಕೋಲಾರದ ಯುವಕನ ಆಗ್ರಹ ಹಾಗೂ ಮದುವೆ ಭಾಗ್ಯ ಗ್ಯಾರಂಟಿಯ ಭರವಸೆ ಮೇಲ್ನೋಟಕ್ಕೆ ತಮಾಷೆಯಂತೆ ಕಾಣಿಸಿದರೂ, ಅವು ಈ ಹೊತ್ತಿನ ಬಹು ಮುಖ್ಯ ಸಾಮಾಜಿಕ ಸಮಸ್ಯೆಯೊಂದರತ್ತ ಬೆಟ್ಟು ಮಾಡುತ್ತಿವೆ. ಹಿಂದೆಲ್ಲ 'ವರಾನ್ವೇಷಣೆ' ಕನ್ಯಾಪಿತೃಗಳ ನಿದ್ದೆ ಕಸಿಯುತ್ತಿತ್ತು. ಈಗ ವಧುಗಳ ಅನ್ವೇಷಣೆಯ ಸಮಯ! ಮದುವೆಗೆ ಬಂದ ಗಂಡುಮಕ್ಕಳ ಪೋಷಕರು ಎದೆಯುಬ್ಬಿಸಿಕೊಂಡು ಬಿಗುಮಾನದಿಂದ ವರ್ತಿಸುವ ಕಾಲ ಇದಲ್ಲ. ವಧು ವರರ ಸಮಾವೇಶಗಳಲ್ಲಿ ಭಾಗವಹಿಸುವ ವಿವಾಹಾಕಾಂಕ್ಷಿ ಯುವತಿಯರಿಗಿಂತಲೂ ಯುವಕರ ಸಂಖ್ಯೆ ಹಲವು ಪಟ್ಟು ಹೆಚ್ಚಾಗಿರುತ್ತದೆ. ಕಳೆದ ನವೆಂಬರ್‌ನಲ್ಲಿ, ಆದಿಚುಂಚನಗಿರಿಯಲ್ಲಿ ನಡೆದ ಒಕ್ಕಲಿಗ ವಧು ವರರ ಸಮಾವೇಶದಲ್ಲಿ ಸುಮಾರು 200 ಹುಡುಗಿಯರು ಭಾಗವಹಿಸಿದ್ದರೆ, 10 ಸಾವಿರಕ್ಕೂ ಹೆಚ್ಚು ಗಂಡುಗಳು ಹುಡುಗಿಯರನ್ನು ಅರಸಿ ನೆರೆದಿದ್ದರು. ಹವ್ಯಕ ಸಮುದಾಯದ ಹುಡುಗರಿಗೂ ಬಾಳ ಸಂಗಾತಿ ದೊರೆಯುವುದು ದುರ್ಲಭವಾಗಿರುವ ವಿಷಯ ಆಗಾಗ ಸುದ್ದಿಯಾಗುತ್ತಲೇ ಇರುತ್ತದೆ.

'ವಧುಗಳ ಬರಗಾಲ'ಕ್ಕೆ ಹಲವು ಕಾರಣಗಳಿವೆ. ಒಳ್ಳೆಯ ಮನೆತನ ಹಾಗೂ ಕುಟುಂಬದ ಆರ್ಥಿಕ ಸ್ಥಿತಿ ಈ ಮೊದಲು ಗಂಡಿನ ಅರ್ಹತೆಗಳಾಗಿದ್ದವು. ಬದಲಾದ ಸಂದರ್ಭದಲ್ಲಿ, ಗಂಡಿನ ಉದ್ಯೋಗಕ್ಕೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ. ನಗರ ಪ್ರದೇಶಗಳಲ್ಲಿ, ಅದರಲ್ಲೂ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಉದ್ಯೋಗಗಳಲ್ಲಿರುವ ಗಂಡುಗಳೇ ಬೇಕು ಎಂದು ಅಪೇಕ್ಷಿಸುವ ಹುಡುಗಿಯರು ಹೆಚ್ಚಾಗಿದ್ದಾರೆ. ವಿದೇಶಗಳಲ್ಲಿ ನೆಲೆ ಕಂಡುಕೊಂಡಿರುವ ಜಂಟಲ್‌ಮೆನ್‌ಗಳಿಗೆ ಹೆಚ್ಚಿನ ಆದ್ಯತೆ! ಹುಡುಗರ ಬಗೆಗಿನ ನಿರ್ಲಕ್ಷ್ಯಕ್ಕೆ ಮತ್ತೊಂದು ಕಾರಣ, ಅವರ ಕೃಷಿ ಹಿನ್ನೆಲೆ. ಬದಲಾದ ಸಾಮಾಜಿಕ ಸಂದರ್ಭದಲ್ಲಿ ಕೃಷಿ ಆಕರ್ಷಕ ಉದ್ಯೋಗವಾಗಿ ಉಳಿದಿಲ್ಲ. ನಗರದಲ್ಲಿ ನೆಲೆಸಬೇಕೆಂಬ ಹಂಬಲದಿಂದಲೂ ಕೃಷಿ ಕುಟುಂಬಗಳಿಗೆ ವಧುವಾಗಿ ಹೋಗಲು ಹುಡುಗಿಯರು ಹಿಂಜರಿಯುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳ ಅನೇಕ ಹುಡುಗಿಯರಿಗೆ ಮದುವೆಯೆನ್ನುವುದು ನಗರ ಪ್ರದೇಶಗಳಿಗೆ ಪ್ರವೇಶ ಕಲ್ಪಿಸುವ ರಹದಾರಿಯಂತೆ ಕಾಣಿಸುತ್ತಿದೆ. ಹೆಣ್ಣುಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವುದರಿಂದಾಗಿ, ಅವರು ತಮಗಿಂತಲೂ ಹೆಚ್ಚು ಓದಿರುವ ಸಂಗಾತಿಯನ್ನು ಬಯಸುವುದು ಕೂಡ ಹುಡುಗರ ಸಂಕಷ್ಟಕ್ಕೆ ಕಾರಣವಾಗಿದೆ.

ಮದುವೆಯಾಗಲು ಹುಡುಗರು ಪೇಚಾಡುತ್ತಿದ್ದಾರೆ ಎಂದಮಾತ್ರಕ್ಕೆ, ಹೆಣ್ಣುಮಕ್ಕಳಿಗೆ ವರ ಸಿಗುವುದು ಈಗ ಸುಲಭ ಎಂದರ್ಥವಲ್ಲ. ಸಂಗಾತಿಯ ಆಯ್ಕೆಯ ತೊಡಕುಗಳು ಗಂಡು–ಹೆಣ್ಣು ಇಬ್ಬರಿಗೂ ಒಂದೇ ಆಗಿವೆ. ಆದರೆ, ಈಗ ಬೇಡಿಕೆಗಳನ್ನು ಮಂಡಿಸುವುದು ಗಂಡಿನ ಹಕ್ಕಾಗಿ ಉಳಿದಿಲ್ಲ ಎನ್ನುವ ಮಟ್ಟಿಗೆ ಸಾಮಾಜಿಕ ಸಂದರ್ಭ ಬದಲಾಗಿದೆ.

ಭರವಸೆಗಳನ್ನು ನೀಡುವುದೇ ರಾಜಕಾರಣ ಎಂದುಕೊಂಡಿರುವ ರಾಜಕಾರಣಿಗಳಿಗೆ 'ವಧುಗಳ ಬರಗಾಲ' ಚುನಾವಣಾ ವಿಷಯವಾಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ, ಈ ರಾಜಕಾರಣಿಗಳಿಗೆ ಹೊಸಗಾಲದ ಮದುವೆಯ ಬಿಕ್ಕಟ್ಟುಗಳಿಗೆ ಸಂಬಂಧಿಸಿದ ಸೂಕ್ಷ್ಮಗಳು ಅರ್ಥವಾಗುವುದು ಹೇಗೆ? ಕೃಷಿ ಕ್ಷೇತ್ರದ ಬಿಕ್ಕಟ್ಟಿಗೆ ಹಾಗೂ ಹಳ್ಳಿಗಳು ವೃದ್ಧಾಶ್ರಮಗಳ ಸ್ವರೂಪ ಪಡೆದುಕೊಳ್ಳುವಲ್ಲಿ ರಾಜಕಾರಣಿಗಳ ಕೊಡುಗೆಯೇ ದೊಡ್ಡದು. ಸಾಮಾಜಿಕ ತರತಮ ಹಾಗೂ ಗ್ರಾಮ–ನಗರಗಳ ಅಂತರವನ್ನು ಕಡಿಮೆಗೊಳಿಸಲು ಸಾಧ್ಯವಾಗದೆ, ಅವಿವಾಹಿತರಿಗೆ ಮದುವೆ ಮಾಡಲಿಕ್ಕೆ ಹೊರಡುವ ರಾಜಕಾರಣಿಗಳ ಮಾತನ್ನು ಚುನಾವಣಾ ಸಂದರ್ಭದ ವಿನೋದಗಳಲ್ಲೊಂದು ಎಂದು ಪರಿಗಣಿಸುವುದೇ ಉತ್ತಮ.

■ ರಘುನಾಥ ಚ.ಹ.